ಸ) ಕಳಕಂಡಂತೆ ಗ್ರಾನೈಟ್ ಶಿಲೆಗಳನ್ನು ಮಂಗಳೂರು ಬಂದರಿನಿಂದ ರಫ್ತು ಮಾಡಲಾಗಿದೆ.

೧೯೮೫–೮೬	೨,೪೬,೫೦೦ ಟನ್
೧೯೮೬–೮೭	೩,೧೬,೦೦೦ ಟನ್
೧೯೮೭–೮೮	೩,೭೭,೦೦೦ ಟನ್

(ಇದರಲ್ಲಿ ತಮಿಳುನಾಡು ಮತ್ತು ಆಂಧ್ರ ಪ್ರದೇಶದಿಂದ ಮಂಗಳೂರು ಬಂದರಿನ ಮೂಲಕ ರಫ್ತಾಗಿರುವ ಪ್ರಮಾಣವೂ ಸೇರಿದೆ).

ರಾಜ್ಯದಲ್ಲಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಪೂರೈಕೆ

೧೦೭. ಶ್ರೀ ಎ. ಕೃಷ್ಣಪ್ಪ. (ವರ್ತೂರು).— ಮಾನ್ಯ ಕೈಗಾರಿಕೆ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ನೀಡಬೇಕೆಂದು ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು?

ಆ) ಆ ಪೈಕಿ ಮಾರ್ಚ್ ೧೯೯೦ರ ಕೊನೆಯವರಿಗೆ ಎಷ್ಟು ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆ,

ಇ) ಉಳಿದವರಿಗೆ ಮಂಜೂರಾತಿ ನೀಡದಿರಲು ಕಾರಣವೇನು?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು)

ಅ) ಮಾರ್ಚ್ ೯೦ರ ಅಂತ್ಯದವರೆಗೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ೬೨,೨೪೪ ಅರ್ಜಿಗಳು (ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಸಂಪರ್ಕಕ್ಕಾಗಿ) ಬಂದಿದ್ದವು.

ಆ) ಆ ಪೈಕಿ ಮಾರ್ಚ್ ೯೦ರ ಅಂತ್ಯದವರೆಗೆ ೪೭,೨೬೮ ಅರ್ಜಿಗಳಿಗೆವ ಮಂಜೂರಾತಿ ನೀಡಲಾಗಿದೆ.

ಇ) ಬಾಕಿ ಉಳಿದ ೧೪,೯೭೬ ಅರ್ಜಿಗಳಿಗೆ ಮಂಜೂರಾತಿ ನೀಡದಿರಲು ಮುಖ್ಯ ಕಾರಣಗಳು

೧) ಕೆಲವು ಅರ್ಜಿಗಳು ಮಂಡಳಿಯ ಕಛೇರಿಯಲ್ಲಿ ಇತ್ತೀಚೆಗೆ ನೋಂದಾಯಿಂತವಾಗಿದ್ದು, ವಿದ್ಯುತ್ ಸಂಪರ್ಕದ ಸಾಧ್ಯತೆ ಬಗ್ಗೆ ಸ್ಥಳ ಪರಿಶೀಲನೆಯಂ ಹಂತದಲ್ಲಿವೆ.

೨) ಹಲವು ಅರ್ಜಿಗಳು, ಸ್ಥಳ ಪರಿಶೀಲನೆ ಮಾಡಿದ ನಂತರ ಅಂದಾಜು ಪಟ್ಟಿಯು ತಯಾರಿಕೆ ಹಂತದಲ್ಲಿವೆ.

೩) ಹಲವು ಅರ್ಜಿಗಳು, ಅಂದಾಜು ಪಟ್ಟಿ ತಯಾರಿಕೆ ನಂತರ ಮಂಜೂರಾತಿಗಾಗಿ ಉಪ ವಿಭಾಗ, ವಿಭಾಗ ವೃತ್ತ ಮತ್ತು ವಲಯ ಕಛೇರಿಗಳ ಪರಿಶೀಲನೆಯಲ್ಲಿವೆ.

ವರದಿಗಳನ್ನು ಒಪ್ಪಿಸುವುದು

ಉಪಾಧ್ಯಕ್ಷರು.— ಮಾನ್ಯ ಅಧ್ಯಕ್ಷರೇ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ

ಶ್ರೀ ಕೆ. ಕುಶಾಲ — ಮಾನ್ಯ ಅಧ್ಯಕ್ಷರೇ ಈ ಸದನವು ವರದಿಯನ್ನು ಒಪ್ಪುವುತ್ತದೆ ಎಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷರು.— ಒಪ್ಪಿಸಲಾಯಿತು.

ಮೈಸೂರಿನಲ್ಲಿ ನಡೆದ ಗಲಭೆಯ ಬಗ್ಗೆ

† ಶ್ರೀ ಪಿ ಜಿ.ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ ಒಂದು ವಿಚಾರವನ್ನು ನಾನು ತಮ್ಮ ಪರವಾನಗಿಯನ್ನು ಪಡೆದು ಸರ್ಕಾರದಿಂದ ಉತ್ತರವನ್ನು ನಿರೀಕ್ಷೆ ಮಾಡಿದ್ದೆ. ಮಾನ್ಯ ಸಭಾ ನಾಯಕರು ಇಪ್ಪತ್ತು ದಿವಸಗಳಲ್ಲಿ ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ಪ್ರಕಟ ಆಗಿದೆ. ಆದ್ದರಿಂದ ಈ

† ಈ ಚಿಹ್ನೆ ಸಂಬಂಧಪಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸದನ ಎರಡು ಗಂಟೆಗೆ ಅಥವಾ ಮೂರು ಗಂಟೆಗೆ ಮುಂಗಿಯುತ್ತದೆ. ಅಷ್ಟರೊಳಗೆ ಸರ್ಕಾರದಿಂದ ನಾವು ಒಂದು ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಮೈಸೂರಿನಲ್ಲಿ ಬಹಳ ಗಂಭೀರವಾದಂತಹ ಪರಿಸ್ಥಿತಿ ಉದ್ಭವ ಆಗಿದೆ. ಮೈಸೂರಿನಿಂದ ಚುನಾಯಿ ತರಾಗಿರತಕ್ಕ ಸಚಿವಸಂಪುಟದ ಜವಾಬ್ದಾರಿ ಸದಸ್ಯರಾಗಿದ್ದ ಪಾಸ್ಯ ಮಂತ್ರಿಗಳು ಆಲ್ಲಿಗೆ ಹೋಗಿರಲಿಲ್ಲ, ಬೇರೆ ಮಂತ್ರಿಗಳು ನೋಡಿಕೊಂಡು ಬರಲಿಕ್ಕೆ ಹೋಗಿದ್ದಾರೆ. ಈಗ ಇಬ್ಬರೂ ಮಂತ್ರಿಗಳೂ ಸಹಿತ ಇದ್ದಾರೆ.ಮೈಸೂರಿನಲ್ಲಿ ಗಲಭೆ ಪರಿಸ್ಥಿತಿಯನ್ನು ನೋಡಿಕೊಂಡು ಬರಲಿಕ್ಕೆ ಹೋದ ಮಂತ್ರಿಗಳೂ ಸಹ ಇದ್ದಾರೆ. ಇದರ ಬಗ್ಗೆ ಸಾಕಷ್ಟು ತಿಕ್ಕಾಟ ಅಲ್ಲಿ ನಡೆದಿದೆ. ಎಂದು ಇವೊತ್ತಿನ ಪತ್ರಿಕೆಗಳಲ್ಲಿ ವರದಿ ಇದೆ.....

ಅಧ್ಯಕ್ಷರು.— ಮೈಸೂರಿನ ಮಂತ್ರಿಗಳೆಂದು ಇಲ್ಲ. ಕರ್ನಾಟಕ ರಾಜ್ಯದ ಮಂತ್ರಿಗಳು.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಮೈಸೂರಿನಿಂದ ಗೆದ್ದು ಬಂದವರು. ಆ ಕ್ಷೇತ್ರದಿಂದ ಗೆದ್ದು ಬಂದಮೇಲೆ ಅವರು ಆಲ್ಲಿಗೆ ಹೋಗಿಲ್ಲ ಎಂಬ ಪತ್ರಿಕೆಗಳಲ್ಲಿ ವರದಿ ಆಗಿದೆ. ಈಗ ೧೫೩ ಜನರನ್ನು ಬಂಧಿಸಿ ಬಳ್ಳಾರಿ ಜೈಲಿನಲ್ಲಿ ಇಟ್ಟಿದ್ದಾರೆ. ೨೬ ವರ್ಷದ ಯುವಕ ಒಬ್ಬ ಆದರಲ್ಲಿ ಸತ್ತಿದ್ದಾನೆ. ಇನ್ನೂ ಎಷ್ಟು ಜನ ಸಾಯುತ್ತಾರೋ ಗೊತ್ತಿಲ್ಲ. ಈ ಗಲಭೆ ಬೇರೆ ಪ್ರದೇಶಕ್ಕೆ ಹರಡದಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಇದು ಇಷ್ಟೇ ಅಲ್ಲ. ಇವೊತ್ತು ಮೈಸೂರು, ಮಂಡ್ಯ ಜೊತೆಗೆ ಮಂಗಳಾಗಿರಿನಲ್ಲಿ ಇದೇ ತರಹದ ಘಟನೆಗಳು ನಡೆದಿವೆ. ಮತ್ತೆ ಈ ಗಲಭೆಗಳು ಮರುಕಳಿಸುತ್ತಿವೆಯೆಂದು ಇವತ್ತಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ಬಹಳ ಗಂಭೀರವಾದ ಪರಿಸ್ಥಿತಿ ಇವೊತ್ತು ಅಲ್ಪ ಸಂಖ್ಯಾತರ ಮತ್ತು ಸಾಮಾನ್ಯ ಜನರ ಪ್ರಾಣ ರಕ್ಷಣೆ ಮಾಡುವ ಪರಿಸ್ಥಿತಿ ಬಂದಿದೆ. ರಾಜ್ಯದಲ್ಲಿ ಉನ್ನತ ಸಭೆಯು ಇಲ್ಲಿ ನಡೆಯುತ್ತಿದೆ. ಆದ್ದರಿಂದ ನಾನು ಮಾನ್ಯ ಸರ್ಕಾರವನ್ನು ಕೇಳುವುದಿಷ್ಟೇ, ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅಲ್ಲಿ ಇವತ್ತಿನ ಪರಿಸ್ಥಿತಿ ಏನು ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಮಾನ್ಯ ಅಧ್ಯಕ್ಷರೇ ಮತ್ತೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು ಧರಣಿ ಕುಳಿತಿದ್ದಾರೆ. ತಾವು ದೊಡ್ಡ ಮನಸ್ಸು ಮಾಡಬೇಕು. ತಾವು ಈ ಸಭೆಗೆ ಕೀರ್ತಿ ತರಲಿಕ್ಕೆ ಶಕ್ತ ಇರತಕ್ಕಂಥವರು. ನಿಮಗೆ ೨೦ ವರ್ಷಗಳ ರಾಜಕೀಯ ಅನುಭವ ಇದೆ. ತಾವು ದೊಡ್ಡ ಮನಸ್ಸು ಮಾಡಿ ಅವರಿಗೆ ಹೇಳಿದರೆ ಅವರು ಒಪ್ಪಿಕೊಳ್ಳುತ್ತಾರೆ. ಇವೊತ್ತು ಸದನದಲ್ಲಿ ಹಿರಿಯ ಸದಸ್ಯರುಗಳಾದ ಮಾನ್ಯ ರಂಗನಾಥ್‌ರವರು ಇದ್ದಾರೆ. ವಿರೋಧ ಪಕ್ಷದಲ್ಲಿದ್ದುಕೊಂಡು ಅನುಭವ ಪಡೆದು ಈಗ ಸಚಿವರಾಗಿರುವ ಮಾನ್ಯ ನರಸಿಂಹಮೂರ್ತಿಯವರು ಇದ್ದಾರೆ. ಅವರು ಧರಣಿ ಕುಳಿತಿರುವಾಗ ನಾವು ಕಾರ್ಯಕಲಾಪಗಳನ್ನು ನಡೆಸತಕ್ಕಂಥದ್ದು ಯಾರಿಗೂ ಶೋಭೆ ತರತಕ್ಕಂಥದ್ದಲ್ಲ. ತಾವು ದಯವಿಟ್ಟು ದೊಡ್ಡ ಮನಸ್ಸು ಮಾಡಿ ಸದನದ ಹೊರಗೆ ಧರಣಿ ಕುಳಿತಿರುವವರನ್ನು ಕರೆದು ಸಂಧಾನ ಮಾಡಿ ಅವರ ಮನ ಒಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡಿ, ಇನ್ನು ಮೈಸೂರಿನಲ್ಲಿ ನಡೆದಿರತಕ್ಕಂಥ ಘಟನೆ ಬಗ್ಗೆ ಮತ್ತು ಅಲ್ಲಿ ಉದ್ಭವವಾಗಿರುವ ಗಂಭೀರ ಪರಿಸ್ಥಿತಿ ಬಗ್ಗೆ ರಾಜ್ಯ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು ಹಾಗೂ ಗಲಭೆಗಳನ್ನು ತಡೆಗಟ್ಟಲಿಕ್ಕೆ ಸರ್ಕಾರ ಸಮರ್ಥವಾಗಿದೆಯೇ ಎಂದೂ ತಿಳಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ಇತ್ತೀಚಿನ ದಿನಗಳಲ್ಲಿ ಲಾಕಪ್‌ಗಳ ಸಾವು ಮತ್ತು ಜೈಲಿನಲ್ಲಿ ಸಾಯಿತಕ್ಕಂಥಾದ್ದು ಒಂದು ಪರಿಪಾಠವಾಗಿದೆ. ಈ ಸರ್ಕಾರ ಬಂದ ನಂತರ ಗುಲ್ಬರ್ಗಾದಲ್ಲಿ ಸತ್ತಿರತಕ್ಕಂಥಾದ್ದು ಸಭೆಯ ಗಮನಕ್ಕೆ ಈಗಾಗಲೇ ಬಂದಿದೆ. ಈಗ ಬಳ್ಳಾರಿಯಲ್ಲಿ ಸತ್ತಿರತಕ್ಕಂಥಾದ್ದು ಬಹಳ ಗಂಭೀರ ಪರಿಸ್ಥಿತಿಯದಾಗಿದೆ. ಮೈಸೂರು ನಗರ ಮತ್ತು ಕರ್ನಾಟಕ ರಾಜ್ಯದ ಅನೇಕ ಮೂಲೆಗಳಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಿದೆ. ಇವರ ಸಾವಿಗೆ ಕಾರಣ ಏನು? ಯಾವ ಕಾರಣದ ಮೇಲೆ ಈ ಸಾವಾಗಿದೆ? ಆ ವ್ಯಕ್ತಿ ಮೇಲೆ ದೊಡ್ಡ ರೀತಿಯ ತೊಂದರೆ ಆಗಿದೆ. ಅವರ ಸಾವಿಗೆ ಯಾವ ಯಾವ ಕಾರಣಗಳು ಉದ್ಭವವಾಗಿವೆ? ಇದರ ಬಗ್ಗೆ ಸಮಗ್ರವಾಗಿ ನ್ಯಾಯಾಂಗ ತನಿಖೆಯಾಗಬೇಕು. ಸರ್ಕಾರವು ಇದರ ಬಗ್ಗೆ ಗಂಭೀರವಾದ ಹೇಳಿಕೆ ಕೊಡದಿದ್ದರೆ ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದು ತನಿಖೆಯಾಗಬೇಕು. ಇದು ಗಹನವಾದ ವಿಚಾರವಾಗಿದೆ. ಈ ರೀತಿ ಸರ್ಕಾರ ಪೋಲೀಸ್ ಅಧಿಕಾರವನ್ನು ಉಪಯೋಗಿಸಿ ಪೋಲೀಸರ ದಬ್ಬಾಳಿಕೆಯಿಂದ ಜೈಲುಗಳಲ್ಲಿ ಮತ್ತು ಲಾಕಪ್ಪುಗಳಲ್ಲಿ ಜನರನ್ನು ಕೊಲ್ಲುತ್ತಿದೆ. ಸಾಮಾನ್ಯ ಜನರಿಗೆ ಸರ್ಕಾರದ ಮೇಲೆ ನಂಬಿಕೆ ಹೋಗುತ್ತಿದೆ ಮತ್ತು ಪೋಲೀಸರ ಆಡಳಿತ ಸರ್ಕಾರದಲ್ಲಿ ನಿರ್ಮಾಣ ವಾಗುತ್ತಿದೆ. ಈ ಪೋಲೀಸ್ ಆಡಳಿತವನ್ನು ತಪ್ಪಿಸಬೇಕಾದರೆ ಸರ್ಕಾರವು ಕೂಡಲೇ ಈ ವಿಚಾರವಾಗಿ ಸಮಗ್ರವಾದ ನ್ಯಾಯಾಂಗ ತನಿಖೆಯನ್ನು ಮಾಡಬೇಕು ಮಾನ್ಯ ಮಂತ್ರಿಗಳು ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಬೇಕು. ಆಮೇಲೆ, ಈ ಸಭೆ ನಡೆಯುತ್ತಿದೆ. ಮಾನ್ಯ ಯಡಿಯೂರಪ್ಪನವರು ಧರಣಿ

ಕುಳಿತಿದ್ದಾರೆ. ಅವರನ್ನು ಅಧ್ಯಕ್ಷರು ಕರೆದು ಮಾತುಕತೆನಡೆಸಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ಮಾತುಕತೆಗೆ ನನ್ನನ್ನು ಕರೆದರೆ ನಾನೂ ಬರುತ್ತೇನೆ. ಅವರಿಗೆ ಅನುಕೂಲ ಮಾಡೋಣ.

ಶ್ರೀ ಎಂ.ವಿ. ವೆಂಕಟಪ್ಪ.— ಮಾನ್ಯ ಅಧ್ಯಕ್ಷರೇ, ಹೋದ ತಿಂಗಳು ಮುಳಬಾಗಿಲಿನಲ್ಲಿ ಕೋಮು ಘರ್ಷಣೆಯಾಯಿತು ಆಮೇಲೆ ಎಲ್ಲಾ ಶಾಂತವಾಗಿತ್ತು. ಇಲ್ಲಿಗೆ ಇನ್‌ಚಾರ್ಜ್ ಮಂತ್ರಿಗಳು ಬಂದಿದ್ದರು. ಪೀಸ್ ಕಮಿಟಿಯನ್ನು ಸಹಾ ಮಾಡಲಾಗಿತ್ತು. ಆದರೆ ಪೋಲೀಸಿನವರು ಒಬ್ಬರನ್ನು ದಸ್ತಗಿರಿ ಮಾಡಿರುವುದರಿಂದ ಮುಳಬಾಗಿಲಿನಲ್ಲಿ ಪುನಃ ಘರ್ಷಣೆಗಳು ಆಗುವ ಚಾನ್ಸ್ ಇವೆ. ಇದರಲ್ಲಿ ಪೋಲೀಸರ ಕೈವಾಡ ಕಡಿಮೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧ ಪಕ್ಷದ ಉಪ ನಾಯಕರಾದ ಶ್ರೀ ಪಿ. ಜಿ. ಆರ್. ಸಿಂಧ್ಯರವರು ಮತ್ತು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಮತ್ತು ಮಾನ್ಯ ಸದಸ್ಯರಾದ ಎಂ. ವಿ. ವೆಂಕಟಪ್ಪನವರು ಮಾತನಾಡುತ್ತಾ ರಾಜ್ಯದಲ್ಲಿ ಇತ್ತೀಚೆಗೆ ಅಲ್ಲಲ್ಲಿ ನಡೆದಂತಹ ಕೆಲವು ಗುಂಪು ಘರ್ಷಣೆಗಳ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತ ಪಡಿಸಿದ್ದಾರೆ. ಬಹುಶಃ ಮಾತನಾಡಿದಂಥ ಮಾನ್ಯ ಸದಸ್ಯರಲ್ಲಿ ಮಾನ್ಯ ವೆಂಕಟಪ್ಪನವರೊಬ್ಬರು ಬಿಟ್ಟು ಉಳಿದ ಸದಸ್ಯರು ಸರ್ಕಾರದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡತಕ್ಕಂಥದ್ದರಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ ಎಂದು ಪ್ರಸ್ತಾಪ ಮಾಡಿದರು.

ಶ್ರೀ ಹೆಚ್. ವಿಶ್ವಾಂತಯ್ಯ.— ಆ ಮಾತನ್ನು ಅವರೇ ಹೇಳಿದ್ದುದು ನಾವಲ್ಲ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.— ನಾವು ಹೇಳಿದ್ದುದು ಏನೆಂದರೆ ನಮ್ಮನ್ನು ಸಹ ವಿಶ್ವಾಸಕ್ಕೆ ತೆಗೆದುಕೊಂಡು ಸಮಸ್ಯೆ ಬಗೆಹರಿಸಿ ಎಂದು.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಸದಸ್ಯರಾದ ವೆಂಕಟಪ್ಪನವರು ಮನವಿ ಮಾಡಿದರು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮೈಸೂರಿನಲ್ಲಿ ಗುಂಪು ಘರ್ಷಣೆ ನಡೆಯುತ್ತಿದೆ. ಆ ಬಗ್ಗೆ ನಮ್ಮನ್ನು ತಾವು ವಿಶ್ವಾಸಕ್ಕೆ ತೆಗೆದುಕೊಂಡು ಸಮಸ್ಯೆ ಬಗೆಹರಿಸಿ ಎಂದು ಹೇಳಿದವು. ಈಗ ಮಾನ್ಯ ಸದಸ್ಯರಾದ ವೆಂಕಟಪ್ಪನವರು ಆಡಳಿತ ಪಕ್ಷದ ಸದಸ್ಯರು. ಅವರು ಏನು ಹೇಳಿದ್ದಾರೆ? ಅವರೇನು ಪ್ರಸ್ತಾಪ ಮಾಡಿದರೋ ಅದು ನಿಜವಾಗಿದೆ. ಆದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಅಪರ ವಿಚಾರಗಳ ಬಗ್ಗೆ ಸರ್ಕಾರ ಲಘುವಾಗಿ ಮಾತನಾಡತಕ್ಕಂಥಾದ್ದು ಸರಿಯಲ್ಲ. ಮಾನ್ಯ ಸದಸ್ಯರು ಹಿರಿಯ ಸದಸ್ಯರು ಇದ್ದಾರೆ. ಅವರು ಮೊದಲಿನಿಂದಲೂ ಕಾಂಗ್ರೆಸ್ಸಿಗರು. ಅವರೇನು ಹೇಳಿದರು. ಅಲ್ಲಿ ಪೋಲೀಸಿನವರ ಕೈವಾಡ ಇದೆ. ಅದನ್ನು ಸರ್ಕಾರ ಹತೋಟಿಯಲ್ಲಿಡಿ ಎಂದು ಹೇಳಿದರು. ಆ ಪೋಲೀಸಿನವರು ಯಾರೋ ಕೆಲವರನ್ನು ದಸ್ತಗಿರಿ ಮಾಡಿರುವುದರಿಂದ ಅನಾವಶ್ಯಕವಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಪರಿಸ್ಥಿತಿ ಇದೆ. ಆದ್ದರಿಂದ ದಯಮಾಡಿ ಇದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಿ ಎಂದು ನಾನು ಹೇಳಬಯಸುತ್ತೇನೆ

ಶ್ರೀ ಟಿ. ಎನ್. ನರಸಿಂಹಮೂರ್ತಿ:— ಮಾನ್ಯ ಅಧ್ಯಕ್ಷರೇ ಅವರು ಈ ವಿಷಯದ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತ ಪಡಿಸಿದ್ದಾರೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಮಾನ್ಯ ಅಧ್ಯಕ್ಷರೇ ಮುಳಬಾಗಿಲಿನಲ್ಲಿ ಈ ಘಟನೆ ನಡೆದಂತಹ ಸಂದರ್ಭದಲ್ಲಿ ನಾನು ಜಿಲ್ಲೆಯಲ್ಲಿ ಇದ್ದೆ. ನಾನು ಆ ಜಿಲ್ಲೆಯ ಉಸ್ತುವಾರಿ ಮಂತ್ರಿಯೂ ಸಹ ಇದ್ದೇನೆ. ನನಗೆ ಈ ವಿಚಾರ ದಹಲಿಯಲ್ಲಿದ್ದಾಗ ಗೊತ್ತಾಯಿತು. ಬಹುಶಃ ನನಗೆ ದೆಹಲಿಯಲ್ಲಿ ಅಧಿಕೃತ ಕಾರ್ಯಕ್ರಮಗಳು ಇದ್ದರೂ ಸಹ ಆ ಕಾರ್ಯಕ್ರಮಗಳನ್ನು ರದ್ದು ಮಾಡಿ ಬೆಂಗಳೂರಿಗೆ ಬಂದು ಏರ್‌ಪೋರ್ಟ್‌ನಿಂದ ಸೀದಾ ನಾನು ಊಟ ಸಹ ಮಾಡದೆ ಮುಳಬಾಗಿಲಿಗೆ ಹೋದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಾ ಹೇಳಿದರು ಸರ್ಕಾರ ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ನಾನು ಆ ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿ ಮುಳಬಾಗಿಲಿಗೆ ಭೇಟಿ ಕೊಟ್ಟು ಅಲ್ಲಿ ಒಂದು ಶಾಂತಿ ಸಮಿತಿಯನ್ನು ರಚನೆ ಮಾಡಿ ಅಂಗಡಿಗಳು ಲೂಟಿಯಾಗಿದಂತಹವರ ಮನೆಗಳಿಗೆ ಭೇಟಿ ಕೊಟ್ಟು ಅವರನ್ನು ಸ್ವಾಂತನಗೊಳಿಸಿ ಬಂದಿದ್ದೇನೆ. ಮತ್ತು ಗಲಭೆಯಿಂದ ಗಾಯಗೊಂಡವರನ್ನು ಸಹ ಸ್ವಾಂತನಗೊಳಿಸಿ ಬಂದಿದ್ದೇನೆ. ನನ್ನ ಜೊತೆಯಲ್ಲಿ ಅಲ್ಲಿನ ಸ್ಥಳೀಯ ಶಾಸಕರಾದ ಶ್ರೀಮಾನ್ ವೆಂಕಟಪ್ಪನವರು ಮತ್ತು ಚಿಂತಾಮಣಿ ಕ್ಷೇತ್ರದ ಶಾಸಕರಾದ ಶ್ರೀಮಾನ್ ಚೌಡರೆಡ್ಡಿಯವರು ಸಹ ಇದ್ದರು. ಅಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿದ್ದುದು ನಿಜ. ಆದರೆ ನಾನು ಅಲ್ಲಿಗೆ ಭೇಟಿ

ಕೊಟ್ಟ ನಂತರ ನಾನು ಸೊಕ್ಕ ಕಾರ್ಯಕ್ರಮ ತೆಗೆದುಕೊಂಡ ನಂತರ ಪರಿಸ್ಥಿತಿ ಅಲ್ಲಿ ಹತೋಟಿಗೆ ಬಂದಿದೆ. ಅಲ್ಲಿ ಶಾಂತಿಯುತವಾದ ವಾತಾವರಣವನ್ನು ನಿರ್ಮಾಣ ಮಾಡಿದ್ದೇವೆ. ಸರ್ಕಾರ ಈಗಲೂ ಸಹ ಅಲ್ಲಿನ ಪೋಲೀಸ್ ಎಸ್.ಪಿ.ಯವರೊಂದಿಗೆ ಮತ್ತು ಜಿಲ್ಲಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಸಂಪರ್ಕವನ್ನು ಇಟ್ಟುಕೊಂಡು ಪರಿಸ್ಥಿತಿಯನ್ನು ಗಮನಿಸುತ್ತಿದೆ. ಶ್ರೀಮಾನ್ ವೆಂಕಟಪ್ಪನವರು ಹೇಳಿದಂತೆ ನಿನ್ನೆಯ ದಿವಸ ಅಲ್ಲಿ ಕೆಲವು ಜನರನ್ನು ದಸ್ತಗಿರಿ ಮಾಡಿದ್ದಾರೆಂದು ಗೊತ್ತಾಯಿತು. ಅವರು ನನಗೆ ಈಗ ತಾನೆ ಹೇಳಿದ್ದಾರೆ. ಈ ಶಾಸನ ಸಭೆ ಮುಗಿದ ತಕ್ಷಣ ಸಾಧ್ಯವಾದರೆ ಸಾಯಂಕಾಲವೇ ನಾನು ಮುಳಬಾಗಿಲಿಗೆ ಭೇಟಿ ಕೊಟ್ಟು ಅಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ನಿವಾರಣೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ. ಇನ್ನು ಮತ್ತೊಂದು ವಿಚಾರವನ್ನು ಮಾನ್ಯ ಉಪ ನಾಯಕರು ಮತ್ತು ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.— ಸರ್ಕಾರ ಅಂದರೆ ಮಂತ್ರಿಗಳು. ಮಂತ್ರಿಗಳು ಅಂದರೆ ಸರ್ಕಾರ. ಎರಡೂ ಒಂದೇ. ಈ ವಿಷಯವನ್ನು ನಿನ್ನೆ ದಿವಸ ನಾವು ಇಲ್ಲಿ ಪ್ರಸ್ತಾಪ ಮಾಡಿದೆವು. ಆದರೆ ನಿನ್ನೆ ದಿವಸ ಮಾನ್ಯ ಮಂತ್ರಿಗಳಾದ ಎಸ್. ಎಂ. ಯಾಹ್ಯರವರು ಮೈಸೂರು ನಗರಕ್ಕೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಸ್ವತಃ ಶಿಲಿದುಕೊಂಡು ಬಂದಿದ್ದಾರೆ. ಅವರು ದಯ ಮಾಡಿ ಈ ಸದನಕ್ಕೆ ವಿಷಯ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ. — ಮಾನ್ಯ ಕೈಗಾರಿಕೆ ಮಂತ್ರಿಗಳು ನಿನ್ನೆಯ ದಿವಸ ಮೈಸೂರಿನಲ್ಲಿಯೇ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ ಮತ್ತೊಂದು ವಿಚಾರವನ್ನು ನಾನು ತಮಗೆ ಹೇಳತಕ್ಕಂಥಾದ್ದು ಅದು ಒಂದು ದುರ್ದೈವದ ಸಂಗತಿ. ಮೈಸೂರು ನಗರದ ಬಗ್ಗೆ ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಪ್ರಸ್ತಾಪ ಮಾಡಿದ್ದಾರೆ. ನಾನು ಮೇಲ್ಮನೆಯಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದಾಗ ರಾಜ್ಯದಲ್ಲಿ ಎಲ್ಲೆಲ್ಲಿ ಗುಂಪು ಘರ್ಷಣೆಗಳು ನಡೆದವೋ ಅವುಗಳನ್ನು ಕೋಮುವಾರು ಗಲಭೆಗಳು ಎಂದು ಕರೆಯುವುದಕ್ಕೆ ಈಗಲೂ ನಾನು ತಯಾರು ಇಲ್ಲ. ನಾವು ಈ ವಿಷಯವನ್ನು ಬಹಳ ಎಚ್ಚರಿಕೆಯಿಂದ ಗಮನಿಸಬೇಕಾಗಿತ್ತದೆ. ನಾವು ಕೋಮು ಘರ್ಷಣೆಗಳ ಬಗ್ಗೆ ಮಾತನಾಡಿದರೆ ಅದು ರಾಷ್ಟ್ರದ ಹಿತಕ್ಕೆ ಧಕ್ಕೆ ಬರಬಹುದು. ಮತ್ತು ಈ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ ಬರಬಹುದು ಆದ್ದರಿಂದ ನಾನು ಆ ರೀತಿ ಕರೆಯುವುದಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಇಡೀ ರಾಜ್ಯದಲ್ಲಿ ವ್ಯಾಪಕವಾಗಿ ಎಲ್ಲಾ ಸ್ಥಳಗಳಿಗೂ ಭೇಟಿ ಕೊಟ್ಟಿದ್ದೇನೆ. ಆದರೆ ಮೈಸೂರು ನಗರದಲ್ಲಿ ನಡೆದಂಥ ಘಟನೆ ಬಹಳ ದುರ್ದೈವ. ಈ ಘಟನೆ ಬಗ್ಗೆ ಪರಿಶೀಲಿಸಲು ಮಾನ್ಯ ಮುಖ್ಯಮಂತ್ರಿಗಳು ನನಗೆ ತಿಳಿಸಿದ ಕೂಡಲೇ ನಾನು ಹೋಗಬೇಕೆಂದು ಹೊರಟೆ. ಬಹುಶಃ ನಾನು ಮಂತ್ರಿಮಂಡಲದ ಒಬ್ಬ ಸದಸ್ಯನಾಗಿ ಆ ದಿವಸ ಮಂತ್ರಿಮಂಡಲದ ಸಭೆ ಇತ್ತು. ಪ್ರಥಮತ ನಾನು ಆ ಸಭೆಗೆ ಗೈರು ಹಾಜರಾಗಿ ಮೈಸೂರು ನಗರಕ್ಕೆ ಹೋದೆ. ಅಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಶಾಸಕರನ್ನು ಮತ್ತು ಕಾರ್ಪೊರೇಟರ್‌ನನ್ನು ಕರೆದು ಒಂದು ಸಭೆ ಮಾಡಿ ಶಾಂತಿಯುತ ವಾತಾವರಣವನ್ನು ನಿರ್ಮಾಣ ಮಾಡಿ ಬಂದೆ. ಆದರೆ ನಿನ್ನೆಯ ದಿವಸ ಅಸ್ಲಾಮ್ ಪಾಷಾ ಎನ್ನುವ ಯುವಕನನ್ನು ಮೈಸೂರು ನಗರದ ಪೋಲೀಸ್ ಅಧಿಕಾರಿಗಳು ಕಾಯ್ದೆ ಪ್ರಕಾರ ದಸ್ತಗಿರಿ ಮಾಡಿ ಬಳ್ಳಾರಿಗೆ ತೆಗೆದುಕೊಂಡು ಹೋದರು. ಆತ ಜೈಲಿನಲ್ಲಿ ಮೃತಪಟ್ಟಿದ್ದಾನೆ ಎನ್ನುವ ವಿಚಾರವನ್ನು ತಾವು ಈಗ ಪ್ರಸ್ತಾಪ ಮಾಡಿದ್ದೀರಿ. ಈ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆದೇಶದ ಮೇರೆಗೆ ನಮ್ಮ ರಾಜ್ಯದ ಕೈಗಾರಿಕಾ ಸಚಿವರು ಮೈಸೂರಿಗೆ ಹೋಗಿದ್ದಾರೆ. ಅಲ್ಲಿ ಭೇಟಿಯಾದ ಬಗ್ಗೆ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ವರದಿ ಆಗಿದೆ. ಈಗ ಪರಿಸ್ಥಿತಿ ಅಲ್ಲಿ ಸಂಪೂರ್ಣವಾಗಿ ಹತೋಟಿಯಲ್ಲಿ ಇದೆ. ನಾನು ಒಬ್ಬ ಜವಾಬ್ದಾರಿಯುತ ಮಂತ್ರಿಯಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಮತ್ತು ಸದಸ್ಯರುಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಇದನ್ನು ಕೋಮು ಗಲಭೆಗಳೆಂದು ತಿಳಿಯುವ ವಾತಾವರಣಕ್ಕೆ ಬಿಡದೆ ಇದನ್ನು ತಾವು ಕೈಬಿಟ್ಟು ಸಮಾಜಘಾತಕ ಶಕ್ತಿಗಳು ಈ ಒಂದು ಅವಕಾಶವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡದೆ ಈ ಗುಂಪು ಘರ್ಷಣೆಗಳನ್ನು ಹತ್ತಿಕ್ಕಲು ನಾವು ಮತ್ತು ನೀವು ಎಲ್ಲರೂ ಸೇರಿ ನಿವಾರಣೆ ಮಾಡೋಣ. ನಾವು ನಿಮ್ಮ ಸಹಕಾರವನ್ನು ಎಲ್ಲಾ ಕಾಲದಲ್ಲಿಯೂ ನಿರೀಕ್ಷೆ ಮಾಡುತ್ತೇವೆ. ಮತ್ತು ಮಾನ್ಯಮುಖ್ಯಮಂತ್ರಿಗಳ ಪರವಾಗಿರತಕ್ಕಂಥ ಈ ಒಂದು ಹೇಳಿಕೆಯನ್ನು ನಾನು ಸಭೆಯ ಮುಂದೆ ಮಂಡಿಸುತ್ತೇನೆ.

ಕರ್ನಾಟಕ ರಾಜ್ಯ ರೈತ ಸಂಘವು ದಿನಾಂಕ ೨೯-೫-೯೦ರಂದು ತನ್ನ ವಿಭಾಗೀಯ ಸಮ್ಮೇಳನವನ್ನು ಮೈಸೂರಿನಲ್ಲಿ ಏರ್ಪಡಿಸಲಾಗಿದ್ದು ಸದರಿ ಸಮ್ಮೇಳನವು ಕಾವೇರಿ ನೀರಿನ ಹಂಚಿಕೆ ಹಾಗೂ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿತ್ತು. ಮೈಸೂರು, ಮಂಡ್ಯ, ಹಾಸನ, ಹಾಗೂ ಕೊಡಗು ಜಿಲ್ಲೆಗಳ ರೈತರು ಈ ಸಮ್ಮೇಳನಕ್ಕೆ ಬಂದಿದ್ದರು. ಇವರು ಬಸ್, ಲಾರಿ, ಟ್ರಾಕ್ಟರ್ ಮತ್ತು ಇತರ ವಾಹನಗಳಲ್ಲಿ ಬಂದಿದ್ದರು. ಮಂಡ್ಯದಿಂದ ಬರುತ್ತಿದ್ದ ಕೆಲವು ವಾಹನಗಳು ಆಶೋಕ ರೋಡಿನಲ್ಲಿ ಚಲಿಸುತ್ತಿದ್ದಾಗ ಸುಮಾರು ಹತ್ತು ವಾಹನಗಳು ಹೋಗುವ ಮಾರ್ಗವನ್ನು ಬದಲಾಯಿಸಿ ಚಿಕ್ಕದಾದ ಪುಲಿಕೇಶಿ ರಸ್ತೆಗೆ ಪ್ರವೇಶಿಸಿದ್ದರಿಂದ ಸಂಚಾರಕ್ಕೆ ಅಡ್ಡಿಯುಂಟಾಯಿತು ಕೆಲ ಕಿಡಿಗೇಡಿಗಳು ಎರಡು ವಾಹನಗಳ ಮೇಲೆ ಕಲ್ಲುಗಳನ್ನು ತೂರಿದರು. ಇದರಿಂದ ಕೋಪಗೊಂಡ ರೈತರು ತಮ್ಮ ವಾಹನಗಳಿಂದ ಕೆಳಗಿಳಿದು ಆಟೋರಿಕ್ಷಾ ವಾಹನಗಳು ಮತ್ತು ಅಂಗಡಿಗಳ ಮೇಲೆ ಕಲ್ಲುಗಳನ್ನು ತೂರಿದ್ದಲ್ಲದೆ, ಎರಡು ಪೊಪೆಡ್ ಗಳಿಗೆ ಬೆಂಕಿಯನ್ನು ಹಚ್ಚಿದರು. ನಂತರ ರೈತರ ಸಮ್ಮೇಳನ ಟೌನ್‌ಹಾಲಿನ ಹತ್ತಿರ ಹೋಗುತ್ತಿದ್ದಾಗ ಮಂಡಿಮೊಹಲ್ಲಾ ಮತ್ತು ಲಸ್ಕರ್‌ಮಹಲ್ಲಾಗಳಲ್ಲಿ ಕೆಲವು ಆಟೋರಿಕ್ಷಗಳ ಮೇಲೆ ಕಲ್ಲುಗಳನ್ನು ತೂರಲಾಯಿತು. ಇದರಿಂದಾಗಿ ನಾಲ್ಕು ಜನರು ಗಾಯಗೊಂಡಿದ್ದು ೯ ಆಟೋರಿಕ್ಷಗಳನ್ನು ಹಾಳು ಮಾಡಿದ್ದಲ್ಲದೆ ಮೂರು ಪೊಪೆಡ್‌ಗಳನ್ನು ಸುಡಲಾಯಿತು.

ದಿನಾಂಕ ೨೯-೫-೯೦ರಂದು ಸಾಯಂಕಾಲ ೪ ಗಂಟೆ ಸಮಯದಲ್ಲಿ ಮಂಡಿಮೊಹಲ್ಲಾ, ಲಸ್ಕರ್ ಮೊಹಲ್ಲಾ ಹಾಗೂ ಎನ್. ಆರ್. ಮೊಹಲ್ಲಾಗಳಲ್ಲಿ ನಿಷೇದಾಜ್ಞೆಯನ್ನು ಜಾರಿಗೊಳಿಸಲಾಯಿತು. ದಿ. ೩೦-೫-೯೦ರಂದು ಸಾಯಂಕಾಲ ೪-೩೦ರ ಸಮಯದಲ್ಲಿ ಶ್ರೀ ಆಯಾಜ್‌ಪಾಶಾ ಎಂಬುವರು ತಮ್ಮ ಸ್ನೇಹಿತರೊಬ್ಬರ ಜೊತೆಗೆ ಲಸ್ಕರ್‌ಮೊಹಲ್ಲಕ್ಕೆ ಹೋಗುತ್ತಿದ್ದಾಗ ಆ ಜನರು ಶ್ರೀ ಆಯಾಜ್‌ಪಾಷರವರ ಸ್ನೇಹಿತರಿಗೆ ಬೆದರಿಕೆ ಹಾಕಿದಾಗ, ಅವರು ಬೀತಿಯಿಂದ ಓಡಿಹೋದರು. ಇನ್ನಿಬ್ಬರು ಶ್ರೀ ಆಯಾಜ್ ಪಾಷರವರನ್ನು ಸೈಕಲ್ ಚೈನ್‌ನಿಂದ ಹೊಡೆದು ಅವರಲ್ಲಿದ್ದ ರೂಪಾಯಿ ೫೦೦ಗಳನ್ನು ಕಿತ್ತುಕೊಂಡರು. ಶ್ರೀ ಆಯಾಜ್‌ಪಾಷರವರನ್ನು ಅವರ ಮನೆಗೆ ಕರೆದುಕೊಂಡು ಹೋದಾಗ ಬಹಳಷ್ಟು ಜನ ಅವರ ಮನೆಯ ಮುಂದೆ ಸೇರಿದರು. ಆದರೆ ಅವರು ಪ್ರಜ್ಞಾವಸ್ಥೆಯಲ್ಲಿರಲಿಲ್ಲ. ಅಲ್ಲಿದ್ದ ಜನರು ಈ ಕೆಲಸವು ಕೆಲವು ಹಿಂದೂಗಳದ್ದೆಂದು ಭಾವಿಸಿದರು. ಆದ್ದರಿಂದ ಕೆಲವು ಕಿಡಿಗೇಡಿಗಳು ಶ್ರೀ ದೇವರಾಜ್ ಎಂಬ ಹಿಂದೂ ಒಬ್ಬರು ಕಾಂತರಾಜ, ಪಾರ್ಕ್ ರಸ್ತೆಯ ಆಟೋರಿಕ್ಷಾದಲ್ಲಿ ಹೋಗುತ್ತಿದ್ದಾಗ ಇರಿದರು. ಇದರಿಂದಾಗಿ ಶ್ರೀ ದೇವರಾಜ್‌ರವರು ಆ ಸ್ಥಳದಲ್ಲೇ ಮೃತರಾದರು ಶ್ರೀ ದೇವರಾಜ್‌ರವರು ಮರಣ ಹೊಂದಿದ ಸುದ್ದಿ ಆ ಪ್ರದೇಶಕ್ಕೆ ಹಬ್ಬಿ ಇರಕಟ್ಟೆಯ ಹತ್ತಿರ ಶ್ರೀ ಇವಿಂ ಯಾಜ್ ಪಾಶಾ ಎಂಬುವರನ್ನು ಇರಿದಿದ್ದರಿಂದ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದನಂತರ ಅವರು ಸತ್ತಿರುವುದಾಗಿ ಘೋಷಿಸಲಾಯಿತು.

ಈ ಘಟನೆಗಳು ಮಂಡಿಮೊಹಲ್ಲಾ, ಲಸ್ಕರ್‌ಮೊಹಲ್ಲಾ ಹಾಗೂ ಎನ್. ಆರ್. ಮೊಹಲ್ಲಾಗಳು ಸೇರಿದಂತೆ ನಗರದ ಇತರ ಪ್ರದೇಶಗಳಲ್ಲಿ ಗಂಭೀರ ಪರಿಸ್ಥಿತಿಯನ್ನು ಉಂಟುಮಾಡಿದವು. ನಂತರ ದಿನಾಂಕ ೩೧-೫-೯೦ರಂದು ಶ್ರೀರಂಗಪಟ್ಟಣಕ್ಕೆ ಹೋಗುತ್ತಿದ್ದ ಹಿಂದೂ ದಂಪತಿಗಳನ್ನು ಹೊಡೆದು ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಶ್ರೀ ಫಿಲೋಮಿನಾ ರಾಜ್ ಎಂಬುವವರಿಗೆ ಇರಿದ ಘಟನೆಗಳು ನಡೆದವು. ಶ್ರೀ ಫಿಲೋಮಿನಾ ರಾಜ್‌ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗ ಅವರ ಜೀವಕ್ಕೆ ಅಪಾಯವಿರುವುದಿಲ್ಲವಾಗಿ ಕಂಡು ಬಂದಿತು. ನಂತರ ನ್ಯಾಯಾಂಗ ಕಸ್ಟಡಿಯಲ್ಲಿದ್ದ ಶ್ರೀ ಅಸ್ಲಾಂ ಪಾಷಾ ಎಂಬುವವರು ಮಾನಸಿಕ ಅಸ್ವಸ್ಥತೆಯಿಂದಾಗಿ ದಿ. ೫-೬-೯೦ರಂದು ಮರಣಹೊಂದಿದರು. ಈ ಘಟನೆಗಳಲ್ಲಿ ಒಟ್ಟು ೩ ಜನ ಸತ್ತಿದ್ದಲ್ಲದೆ (ಇಬ್ಬರು ಮುಸ್ಲಿಮರು, ಒಬ್ಬರು ಹಿಂದೂ) ಸುಮಾರು ಜನರು (೧೬ ಹಿಂದೂಗಳು, ೨೪ ಮುಸ್ಲಿಮರು) ಗಾಯಗೊಂಡಿರುತ್ತಾರೆ. ಶ್ರೀ ಆಯಾಜ್‌ಪಾಷಾರವರ ಒಂದು ಪ್ರಕರಣವು ಕೆಲವು ಕಿಡಿಗೇಡಿಗಳಿಂದ ನಗರದಲ್ಲಿ ಕೋಮುಗಲಭೆಯನ್ನು ಉಂಟುಮಾಡುವುದಕ್ಕೆ ಕಾರಣವಾಯಿತು.

ಈ ಕೋಮು ಗಲಭೆಗೆ ಸಂಬಂಧಿಸಿದಂತೆ ಮೈಸೂರು ನಗರದ ಆರಕ್ಷಕ ಠಾಣೆಗಳಲ್ಲಿ ಒಟ್ಟು ೬೦ ಪ್ರಕರಣಗಳನ್ನು ದಾಖಲುಮಾಡಿಕೊಳ್ಳಲಾಗಿದ್ದು ೩೧೫ ಜನರನ್ನು ದಸ್ತಗಿರಿ ಮಾಡಲಾಗಿದೆ. ಈ ಘಟನೆಗಳಿಗೆ ಕಾರಣರಾದ ರಿಂಗ್ ಲೀಡರ್ಸ್‌ಗಳ ಬಗ್ಗೆ ಮಾಹಿತಿ ದೊರೆತಿದ್ದು ಅವರನ್ನು ಹಿಡಿಯಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಹಿರಿಯ ಪೋಲೀಸ್ ಅಧಿಕಾರಿಗಳು ಪೋಲೀಸ್ ಬಂದೋಬಸ್ತಿನ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದು ಸಾಕಷ್ಟು ಸಂಖ್ಯೆಯ ಕೆ.ಎಸ್.ಆರ್.ಪಿ. ಹಾಗೂ ಡಿಸ್ಟ್ರಿಕ್ ಆರ್ಮ್‌ಡ್ ರಿಸರ್ವ್‌ಡ್ ಪ್ಲಾಟೂನ್ಸ್‌ಗಳನ್ನು ಒದಗಿಸಲಾಗಿದೆ. ನಗರದಲ್ಲಿ ಸಾಮಾನ್ಯ ವಾತಾವರಣವನ್ನು ಉಂಟುಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದ್ದು ಕಿಡಿಗೇಡಿಗಳನ್ನು ಗಡಿಪಾರು ಮಾಡುವುದನ್ನು ಪರಿಶೀಲಿಸಲಾಗುತ್ತಿದೆ. ಈಗ ನಗರವು ಶಾಂತವಾಗಿದೆ.

ಈ ಮತೀಯ ಗಲಭೆಯಲ್ಲಿ ಸುಮಾರು ೫.೫ ಲಕ್ಷಗಳಷ್ಟು ಆಸ್ತಿಗಳಿಗೆ ನಷ್ಟವುಂಟಾಗಿದೆ. ಈಗಾಗಲೇ ಮೈಸೂರಿನ ಜಿಲ್ಲಾಧಿಕಾರಿಗಳು ಮರಣ ಹೊಂದಿದ ಶ್ರೀ ಬಿ. ದೇವರಾಜ್‌ರವರ ಪತ್ನಿಗೆ ದಿವಾಂಕ ೧೬-೬-೯೦ರ ತಮ್ಮ ಆದೇಶದಲ್ಲಿ ರೂಪಾಯಿ ಇಪ್ಪತ್ತು ಸಾವಿರಗಳ ಪರಿಹಾರವನ್ನು ಮಂಜೂರು ಮಾಡಿರುತ್ತಾರೆ ಈ ಗಲಭೆಯಲ್ಲಿ ಮೃತರಾದ ಗಾಯಗೊಂಡವರ ಇತರ ವ್ಯಕ್ತಿಗಳಿಗೆ ಹಾಗೂ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿರುವವರಿಗೆ ಪರಿಹಾರ ನೀಡುವುದನ್ನು ಪರಿಶೀಲಿಸಲಾಗುತ್ತಿದ್ದು ಮೈಸೂರಿನ ಜಿಲ್ಲಾಧಿಕಾರಿಗಳಿಂದ ವರದಿ ಬಂದ ಕೂಡಲೇ ಪರಿಹಾರವನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆದ್ದರಿಂದ ಸನ್ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡುವುದು ಇಷ್ಟೇ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡತಕ್ಕಂಥಾದ್ದಕ್ಕೆ ತಮ್ಮ ಸಹಕಾರವನ್ನು ನಾನು ಕೋರುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಜೈಲಿನಲ್ಲಿ ಸತ್ತಿದ್ದಾರೆ. ಅದು ನ್ಯಾಯಾಂಗ ತನಿಖೆ ಆಗಬೇಕು.

ಶ್ರೀ ವಾಟಾಳ್ ನಾಗರಾಜ್.—ಈ ಬಗ್ಗೆ ಸಮಗ್ರ ತನಿಖೆಯಾಗಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ಸರ್ಕಾರದ ಪರವಾಗಿ ಮಂತ್ರಿಗಳು ಉತ್ತರ ಕೊಡುತ್ತಾರೆ. ಆ ಬಗ್ಗೆ ನಮಗೇನೂ ಸಂಶಯ ಇಲ್ಲ. ಅವರು ಅತ್ಯಂತ ಹಿರಿಯ ಮಂತ್ರಿಗಳು ಇದ್ದಾರೆ. ಆದರೆ ನಾನು ಹೇಳುವುದೇನೆಂದರೆ ಮಾನ್ಯ ಮಂತ್ರಿಗಳಾದ ಯಾಹ್ಯಾರವರು ಮೈಸೂರು ನಗರಕ್ಕೆ ಭೇಟಿ ಕೊಟ್ಟು ಬಂದಿರುವುದರಿಂದ ಅವರು ಒಂದು ಹೇಳಿಕೆಯನ್ನು ಕೊಟ್ಟು ನಮ್ಮನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಂಡಿದ್ದಿದ್ದರೆ ಚನ್ನಾಗಿ ಇರುತ್ತಿತ್ತು ಎನ್ನುವ ಅಭಿಪ್ರಾಯದಿಂದ ನಾನು ಈ ಮಾತು ಹೇಳಿದೆ. ಮಾನ್ಯ ಮಂತ್ರಿಗಳಾದ ನರಸಿಂಹಮೂರ್ತಿಯವರು ಒಂದು ಹೇಳಿಕೆ ಕೊಟ್ಟಿದ್ದಾರೆ ಆ ಹೇಳಿಕೆಯ ಕಾಪಿಯೂ ಸಹ ನಮಗೆ ಸಿಕ್ಕಿಲ್ಲ. ನಾವು ನಿನ್ನೆಯ ದಿವಸ ಆತ ಸತ್ತ ಸುದ್ದಿ ತಿಳಿಸಿದ ತಕ್ಷಣ ಅಂದರೆ ೨-೩೦ರ ಸಮಯದಲ್ಲಿ ನಮಗೆ ಬೆಳ್ಳಾರಿಯಿಂದ ಸುದ್ದಿ ಬಂತು. ಆತನನ್ನು ಮೈಸೂರು ಕಡೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ತಿಳಿಯಿತು. ನಾವು ಇದನ್ನು ಸಡನ್ ಆಗಿ ಪ್ರಸ್ತಾಪ ಮಾಡಿ ಪ್ರಚಾರ ಸಿಗಲಿ ಎನ್ನುವ ದೃಷ್ಟಿಯಿಂದ ಮಾತನಾಡುತ್ತಿಲ್ಲ. ನಾನಾಗಲಿ ಮತ್ತು ನಮ್ಮ ನಾಯಕರಾಗಲಿ ರೈಜ್ ಮಾಡುವುದಕ್ಕೆ ಹೋಗಲಿಲ್ಲ. ನಾವು ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದೆವು. ನಿನ್ನೆ ಸಾಯಂಕಾಲ ಅವರು ಹೇಳಿದರು ಈ ಸಭೆ ಮುಂಗಿಯಾಪುದಕ್ಕಿಂತ ಮುಂಚಿತವಾಗಿ ಒಂದು ಹೇಳಿಕೆ ಕೊಡುತ್ತೇನೆಂದು ಅದಲ್ಲದೆ ಅವರು ನಮಗೆ ಹೇಳಿದರು ನಿಮಗಿಂತ ಮುಂಚಿತವಾಗಿ ನನಗೆ ಈ ವಿಷಯ ಬೆಳಿಗ್ಗೆ ಗೊತ್ತಾಗಿದೆ, ನಾನು ವಿಷಯ ತಿಳಿಸುತ್ತೇನೆಂದು ಹೇಳಿದ್ದರು ಈಗ ಅವರ ಒಂದು ಹೇಳಿಕೆಯನ್ನು ನಾವು ಕೇಳಿದ ಮೇಲೆ ಆದು ಜಿರೋ ಅವರ್ ಆನ್ನು ಉಪಯೋಗಿಸಿ ಕೊಂಡು, ಜಿರೋ ಅವರ್ ಇಲ್ಲ, ಆದರೂ ತಾವು ನಮಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾವು ಅದನ್ನು ಉಪಯೋಗ ಮಾಡಿಕೊಂಡು ಈ ವಿಷಯವನ್ನೆತ್ತಿದ ಮೇಲೆ ಈ ಹೇಳಿಕೆಯನ್ನು ಕೊಟ್ಟಿದ್ದಾರೆ. ಪ್ರಶ್ನೆ ಏನೆಂದರೆ ಈಗ ಗುಂಪು ಘರ್ಷಣೆ, ಕೋಮು ಘರ್ಷಣೆ ಶಬ್ದಗಳನ್ನು ಉಪಯೋಗಿಸಬಾರದು. ಆದರೆ ಈ ಗುಂಪು ಘರ್ಷಣೆಯನ್ನು ತಡೆಗಟ್ಟಲು ನಾವು ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ ನಮಗೆ ಇದನ್ನು ತಾಪ್ತಿ ಮಾಡಬೇಕೆಂಬ ಉದ್ದೇಶ ಯಾರಿಗೂ ಇಲ್ಲ. ಆದರೆ ೨೬ ವರ್ಷದ ಸದೃಢ ಒಬ್ಬ ಯುವಕ ಆರೋಗ್ಯವಂತ ನಾದ ಒಬ್ಬ ಹುಡುಗ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಹೇಗೆ ಸತ್ತ? ಕಾರಣ ಏನು ಇತ್ತು ಏನು ಕಾಯಿಲೆ ಇತ್ತು ಅವನಿಗೆ ಇನ್‌ಫೆಕ್ಷಿಸ್ ಮಾಡಿದ್ದಾರೆ, ಪೋಸ್ಟ್‌ಮಾರ್ಟಮ್ ರಿಪೋರ್ಟ್ ಬಂದಿದೆ ಎಂದು ಹೇಳಿದ್ದಾರೆ. ಅದು ಆಗಿ ೨೪ ಗಂಟೆಯಾಗಿದೆ ನಿಮ್ಮ ಹತ್ತಿರ ವೈರ್‌ಲೆಸ್ ಎಲ್ಲಾ ಮಿಷನ್ನರಿಸ್‌ಗಳು ಇವೆ. ಇವರ ಸಾವಿಗೆ ಏನು ಕಾರಣ, ಜೈಲ್ ಆಥಾರಿಟಿಸ್‌ಗಳು ಕಾರಣರೂ ಅಥವಾ ಹೆಲ್ತ್ ಡಿಪಾರ್ಟ್‌ಮೆಂಟ್ ಆಫೀಸರ್‌ಗಳು ಕಾರಣರೂ ಎಂಬುದನ್ನು ತಿಳಿದುಕೊಳ್ಳಬೇಕು. ಅವನಿಗೆ ಸರಿಯಾಗಿ ಮೆಡಿಕಲ್ ಟ್ರೀಟ್‌ಮೆಂಟ್ ಕೊಟ್ಟಿದ್ದಾರೋ ಇಲವೋ ಈ ಎಲ್ಲಾ ಕಾರಣಗಳನ್ನು ನಮಗೆ ತಿಳಿಸಬೇಕಾಗಿದೆ. ಮತ್ತೆ ಬೆಳಿಗ್ಗೆ ಜಾವಾ ೪ ಗಂಟೆಗೆ ಅವರ ಶವಸಂಸ್ಕಾರವನ್ನು ಮಾಡಲು ಅವಕಾಶ ಕೊಟ್ಟಿದ್ದಾರೆಂದರೆ, ಅಂದರೆ ಪರಿಸ್ಥಿತಿ ಗಂಭೀರವಾಗಿದೆ. ಅಲ್ಲಿ ಪರಿಸ್ಥಿತಿ ಶಾಂತವಾಗಿಲ್ಲ, ಅಲ್ಲಿಯ ಪರಿಸ್ಥಿತಿ ನಿನ್ನ ಕಂಟ್ರೋಲ್‌ನಲ್ಲಿಲ್ಲ ನಿಮ್ಮ ಮಿಷನರಿ ಫೇಲ್ ಆಗಿದೆ ಎಂದು ನಾವು ಭಾವಿಸಬಹುದೇ ? ಆದರೆ ಹಾಗೆ ನಾವು ಭಾವಿಸುವುದಿಲ್ಲ. ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಇದು ಆಶ್ಚರ್ಯವಾಗುತ್ತದೆ. ಇಷ್ಟೊಂದು ಭದ್ರವಾಗಿರತಕ್ಕ ಸರ್ಕಾರ ಬಂದರೂ ಕೂಡ, ಲಾಕಪ್‌ನಲ್ಲಿ ಜನ ಸಾಯುತ್ತಿದ್ದಾರೂ ಜೈಲಿನಲ್ಲಿ ಇನ್ನೂ ಜನ ಸಾಯುತ್ತಿರಲಿಲ್ಲ, ಮೈಸೂರಿನಿಂದ ಕರೆದುಕೊಂಡು ಬಳ್ಳಾರಿಗೆ ಹೋಗಿದ್ದಾರೆ. ಮೈಸೂರು ಮಹಾರಾಜರ ಕಾಲದಿಂದ ಅಲ್ಲಿ ಕೋಮು ಗಲಭೆ ನಡೆದಿರಲಿಲ್ಲಿ. ಟಿಪ್ಪುಸುಲ್ತಾನನ ಊರು ಶ್ರೀರಂಗಪಟ್ಟಣದಲ್ಲೂ ಕೂಡ ಕೋಮು ಗಲಭೆ ನಡೆದಿರಲಿಲ್ಲ. ಒಬ್ಬ ಅಮಾಯಕ ಯುವಕನನ್ನು ರಕ್ಷಣೆ ಮಾಡಿಲ್ಲವೆಂದು ಬಹಳ ವಿಷಾದವಾಗುತ್ತದೆ. ನಿಮ್ಮ ಕಸ್ಟಡಿಯಲ್ಲಿ

೧೯೩ ಜನರನ್ನು ಬಂಧಿಸಿದ್ದಾರೆಂದು ಹೇಳಿದ್ದೀರಿ, ಎಷ್ಟು ಜನರು ಜೈಲಿನಲ್ಲಿದ್ದಾರೊ ಗೊತ್ತಿಲ್ಲ, ಎಷ್ಟು ಜನ ಇನ್ನೂ ಮುಂದೆ ಸಾಯುತ್ತಾರೊ ನಮಗೆ ಗೊತ್ತಿಲ್ಲ. ಆದ್ದರಿಂದ ಪರಿಸ್ಥಿತಿ ಇವತ್ತು ಶಾಂತವಾಗಿ ಬೇಕು. ನಮಗೆಲ್ಲರಿಗೂ ಈ ಪ್ರಸಂಗ ಕಳಂಕ ತರುವಂಥ್ದಾಗಿದೆ. ಮುಳುಬಾಗಿಲಿನಲ್ಲಿ ಕ್ರಮ ತೆಗೆದು ಕೊಂಡಿದ್ದೀರಿ ನಾನು ಒಪ್ಪುತ್ತೇನೆ. ನಿಮ್ಮನ್ನು ಅಭಿನಂದಿಸುತ್ತೇವೆ. ಕಾಡಕೊತ್ತನೂರಿನಲ್ಲಿ ತೊಂದರೆ ಆದ ಸಂದರ್ಭದಲ್ಲಿ ತಾವು ಹೋಗ್ದಿದ್ದೀರಿ. ಶ್ರೀ ಶಿವಣ್ಣನವರು ಆಲ್ಲಿಗೆ ಹೋಗಿದ್ದರು ಅವರನ್ನು ನಾನು ಅಭಿನಂದಿಸುತ್ತೇನೆ. ಆದರೆ ಬರೀ ಹೋಗುವುದರಿಂದ ಉಪಯೋಗವಾಗುವುದಿಲ್ಲ. ಇವೊತ್ತು ಮೈನಾರಿಟಿಸ್ ಯಾರಿದ್ದಾರೆ ಬೇರೆ ಜನಾಂಗದವರಿಗೆ ಕಾನ್‌ಫರೆನ್ಸ್ ಬರಬೇಕು. ಮೈನಾರಿಟಿಸ್ ಅಷ್ಟೆ ಆಲ್ಲ ಇತರೆ ಜನಾಂಗದವರನ್ನು ಅರಸ್ಟ್ ಮಾಡಿದ್ದಾರೆ. ಆದು ಸರಿಯೋ ತಪ್ಪೋ ಎಂದು ಹೇಳಲಿಕ್ಕೆ ಹೋಗುವುದಿಲ್ಲ. ಆದರೆ ಬಂಧಿತರಾದವರು ಎಲ್ಲರೂ ಸುರಕ್ಷಿತವಾಗಿದ್ದಾರೆಯೆ ? ಎಂಬುದು ನನ್ನ ಪ್ರಶ್ನೆ. ಇನ್ನು ಎರಡನೆಯದಾಗಿ ಜುಡಿಷಿಯಲ್ ಕಸ್ಟಡಿಯಲ್ಲಿ ಜೈಲ್‌ನಲ್ಲಿ ಆತ ಪ್ರಾಣವನ್ನು ಬಿಟ್ಟಿದ್ದಾನೆ ಎಂದರೆ ಇದಕ್ಕೆ ತಪ್ಪಿತಸ್ಥರು ಯಾರು ? ಇದಕ್ಕೆ ಏನು ಕಾರಣ ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆ ಮಾಡಲೇ ಬೇಕಾಗಿದೆ. ತಾವು ಪ್ರಾಪ ವಿಧಾನ ಸೌಧದಲ್ಲಿದ್ದೀರಿ, ಬೆಳಗ್ಗೆ ಬರಬೇಕು ಕೋಶ್ಚನ್ ಆಫರ್‌ಗ ಪ್ರಿಪೇರ್ ಆಗಬೇಕು. ಆದ್ದರಿಂದ ತಾವು ಅಧಿಕಾರಿಗಳು ಕೊಟ್ಟಂತಹ ವರದಿಯನ್ನು ಇಲ್ಲಿ ಹೇಳುತ್ತೀರಿ. ಆದ್ದರಿಂದ ಈ ವಿಷಯದ ಬಗ್ಗೆ ಒಂದು ನ್ಯಾಯಾಂಗ ತನಿಖೆಯನ್ನು ಮಾಡಬೇಕು. ಈ ಗಂಭೀರ ಪರಿಸ್ಥಿತಿಯನ್ನು ತಿಳಿದುಕೊಂಡು ಇದನ್ನು ಹತೋಟಿಗೆ ತರಬೇಕಾದರೆ ನ್ಯಾಯಾಂಗ ತನಿಖೆಯನ್ನು ಮಾಡಬೇಕು. ಈಗ ಸಭಾನಾಯಕರು ಬಂದಿದ್ದಾರೆ. ಬಹಳ ಸಂತೋಷ ಈ ವಿಷಯದ ಗಂಭೀರತೆಯನ್ನು ಹಾಗೂ ಪರಿಸ್ಥಿತಿಯ ಸೂಕ್ಷ್ಮತೆಯನ್ನು ಅವರು ಅರಿತುಕೊಂಡಿದ್ದಾರೆ. ನಿನ್ನೆಯಿಂದ ನಮ್ಮ ಮುಂಖ್ಯ ಮಂತ್ರಿಗಳ ಧಾಟಿ ಬದಲಾವಣೆಯಾಗಿದೆ. ನಾನು ಆದನ್ನು ಸ್ವಾಗತಮಾಡುತ್ತೇನೆ. ಆರು ತಿಂಗಳಿನಿಂದ ನಮ್ಮ ಕೈಯಲ್ಲಿ ಒಂದು ಎಲೆಕ್ಟ್ರೀಕ್ ಪೂಲ್ ಹಾಕಿಸಲು ಆಗುತ್ತಿರಲಿಲ್ಲ. ಈಗ ಅವರು ದೊಡ್ಡ ಮನಸ್ಸು ಮಾಡಿ ೧೧೦ ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ವಿರೋಧ ಪಕ್ಷದವರ ಮಾತಿಗೆ ಬೆಲೆಕೊಟ್ಟದ್ದಾರೆ. ಆದ್ದರಿಂದ ನಾನು ಅವರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ಮೈಸೂರಿನ ಪರಿಸ್ಥಿತಿಯ ಗಂಭೀರತೆಯನ್ನು ತಿಳಿದುಕೊಂಡು ಮುಳುಬಾಗಿಲು ಮುಂತಾದ ಕಡೆಗಳಲ್ಲಿ ಪರಿಸ್ಥಿತಿ ಉದ್ಭವವಾಗದ ರೀತಿಯಲ್ಲಿ, ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡುವ ತೀರ್ಮಾನವನ್ನು ತಾವು ಈ ಸಂದರ್ಭದಲ್ಲಿ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಮತ್ತು ಬಹಳ ಗಹನವಾದ ವಿಷಯವಾಗಿದೆ. ಮಾನ್ಯ ಸಚಿವರಾದ ಶ್ರೀ ನರಸಿಂಹಮೂರ್ತಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಪೋಲೀಸರು ಕೊಟ್ಟಂತಹ ವರದಿಯನ್ನು ಅವರು ಈ ಸಭೆಯಲ್ಲಿ ಹೇಳಿದ್ದಾರೆ. ಇದರಿಂದ ನಮಗೆ ಅನೇಕ ಅನುಮಾನಗಳು ಉದ್ಭವವಾಗುತ್ತವೆ. ಆ ಶವವನ್ನು ಪರೀಕ್ಷಿಸಿದ ವೈದ್ಯರ ವರದಿಯಲ್ಲಿ ಸಾವಿಗೆ ಏನು ಕಾರಣ ಕೊಟ್ಟಿದ್ದಾರೆಂಬುದನ್ನು ತಿಳಿಸಬೇಕು. ಮೈಸೂರಿನಿಂದ ಬಳ್ಳಾರಿ ಜೈಲಿಗೆ ಅವನನ್ನು ಸಗ್ರಾಯಿಸುವ ಪರಿಸ್ಥಿತಿ ಏನಿತ್ತು ಆರೋಗ್ಯವಂತನಾದ ೨೫ ವರ್ಷದ ಯುವಕನ ಸಾವು ಯಾವ ಒಂದು ಸಂದರ್ಭದಲ್ಲಿ ಯಾವರೀತಿಯಲ್ಲಿ ಆಯಿತು ಅದು ಸ್ವಾಭಾವಿಕ ಸಾವೇ ಅಥವಾ ಅಸ್ವಾಭಾವಿಕ ಸಾವೇ ಇದನ್ನು ಆರಿಯಬೇಕಾದರೆ ನ್ಯಾಯಾಂಗ ತನಿಖೆಯಿಂದ ಮಾತ್ರ ಸಾಧ್ಯ. ಇದು ಅಸ್ವಾಭಾವಿಕ ಸಾವೇ ಅಥವಾ ಸ್ವಾಭಾವಿಕ ಸಾವೇ ಎಂಬುದರ ಬಗ್ಗೆ ಸತ್ಯ ಗೊತ್ತಾಗಬೇಕಾದರೆ ಸಮಗ್ರವಾಗಿ ನ್ಯಾಯಾಂಗ ತನಿಖೆಯಾಗಬೇಕು ಹಿಂದೆ ಇದೇ ಸಭೆಯಲ್ಲಿ ಮುನಿಯಮ್ಮನ ಪ್ರಕರಣ ಆಯಿತು ವಯ್ಯಾಲಿಕಾವಲ್ ಪ್ರಕರಣ ಆಯಿತು. ಈ ಸಾವಿನ ಬಗ್ಗೆ ತನಿಖೆ ಮಾಡುವುದಕ್ಕೆ ಮಾನ್ಯ ವೀರೇಂದ್ರಪಾಟೀಲರು ಒಪ್ಪಿಕೊಳ್ಳಬೇಕು. ಎರಡು ಮೂರು ಸಂದರ್ಭಗಳಲ್ಲಿ ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಲಾಗಿತ್ತು. ಇದು ಬಹಳ ಗಂಭೀರವಾದ ಮತ್ತು ಗಹನವಾದ ವಿಚಾರವಾಗಿದೆ. ಇವತ್ತು ೪ ಗಂಟೆಗೆ ಶವವನ್ನು ಹೂಳುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಹೂಳುವುದಕ್ಕಿಂತ ಮುಂಚೆ ಶವವನ್ನು ಪರೀಕ್ಷೆ ಮಾಡಲೇ ಬೇಕಾಗಿದೆ. ಆದಷ್ಟು ಬೇಗ ಹೂಳಿಬಿಡಿ ಎಂದು ಅವರ ಕಡೆಯವರಿಗೆ ಹೆದರಿಸಲಾಗಿದೆ. ಪ್ರಾಣಕ್ಕೆ ಮುಂದಂಜಿರದ ಜನಾಂಗ ಮತ್ತು ಹಿಂದುಳಿದ ಜನಾಂಗ ಎಂಬುದಿಲ್ಲ. ಗೋಲಿಬಾರ್‌ವಲ್ಲಿ ಪೋಲೀಸಿನವರು ಯಾರನ್ನು ಬೇಕಾದರೂ ಹೊಡೆಯುತ್ತಾರೆ. ಅವರಿಗೆ ಮುಂದುವರಿದವರು ಹಿಂದುಳಿದವರು, ೧೪ ಪರ್‌ಸೆಂಟ್‌ನವರು ಎಂದು ಇಲ್ಲ.

ಅಧ್ಯಕ್ಷರು.—ಗುಂಡಿಗೆ, ದೊಣ್ಣೆಗೆ ಅಲ್ಪಸಂಖ್ಯಾತರು ದೊಡ್ಡವರು ಎಂಬುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಪೋಲಿಸಿನವರ ಗೋಲೀಬಾರ್‌ಗೆ, ಟಿಯರ್ ಗ್ಯಾಸ್‌ಗೆ ಯಾರು ಬೇಕಾದರೂ ಸಿಗಬಹುದು. ಪೋಲೀಸ್ ಎನ್ನುವ ಪದವೇ ಬೇರೆ. ಅವರಿಗೂ ನಮಗೂ ಬಹಳ

ವ್ಯತ್ಯಾಸ ಇದೆ. ನಾವು ಜನ ಅವರು ಜನರಲ್ಲ. ಅವರು ಹೆಂಡತಿ ಮತ್ತು ಮಕ್ಕಳನ್ನು ಕಂಡರೂ ಇದೇ ನೀತಿಯನ್ನು ಅನುಸರಿಸುತ್ತಾರೆ. ಇದೆಲ್ಲಾ ನನಗೆ ಚೆನ್ನಾಗಿ ಗೊತ್ತು. ನಾನು ಸಾವಿರಾರು ಸೆಲ್ ಲಾಕಪ್‌ಗೆ ಹೋಗಿದ್ದೇನೆ. ಪ್ರೊ ಲೀಸ್ ಸ್ಟೇಷನ್ ಅನುಭವವನ್ನು ನಾನು ಅನುಭವಿಸಿದ್ದೇನೆ. ೧೯೬೨ನೇ ಇಸವಿ ಡಿಸೆಂಬರ್ ೭ನೇ ತಾರೀಖಿನಂದು ತಮಗೆ ಗೊತ್ತಿರಬಹುದು. ಕರ್ನಾಟಕ ಸರ್ಕಾರದ ಪೋಲೀಸರು ನನ್ನನ್ನು ಬೂಡ್ಸ್‌ನಲ್ಲಿ ಹೊಡೆದಿದ್ದರು. ಹಿಂದೆ ಇದ್ದ ಒಬ್ಬ ದೊಡ್ಡ ಪೋಲೀಸ್ ಆಫೀಸರ್ ಲಾಠಿ ಚಾರ್ಜ್ ಮಾಡುವಾಗ ನನ್ನನ್ನೇ ವೈಯಕ್ತಿಕವಾಗಿ ಹುಡುಕಿ ಹೊಡೆದಿದ್ದ. ಆಗ ನನ್ನ ಪರವಾಗಿ ಇದೇ ಸದನದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿದ್ದರು. ಈ ಪ್ರಶ್ನೆ ಏಕೆ ಹೇಳುತ್ತಿದ್ದೇನೆಂದರೆ, ಇವೊತ್ತಿನ ದಿವಸ ಪೋಲೀಸ್ ಸ್ಟೇಷನ್‌ನಲ್ಲಿ ಭದ್ರತೆ ಇಲ್ಲ ಲಾಕಪ್‌ನಲ್ಲಿ ಭದ್ರತೆ ಇಲ್ಲ ಜೈಲಿನಲ್ಲಿ ಭದ್ರತೆ ಇಲ್ಲ. ಆದ್ದರಿಂದ ನಾನು ಅತ್ಯಂತ ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇದು ಲಘುವಾದ ವಿಚಾರವಲ್ಲ. ಮಾನ್ಯ ವೀರೇಂದ್ರಪಾಟೀಲರ ಸರ್ಕಾರ ಬಂದ ಮೇಲೆ ಗುಲ್ಬರ್ಗಾದಲ್ಲಿ ನಡೆದಿರತಕ್ಕಂಥ ಘಟನೆ ಅವರಿಗೆ ಗೊತ್ತು. ಅವರೂ ನೋಡಿದ್ದಾರೆ. ಮುಖ್ಯ ಮಂತ್ರಿಗಳು ನಿಂತು ಇದನ್ನು ಮಾಡಿಸಿದ್ದಾರೆಂದು ನಾನು ಹೇಳುವುದಿಲ್ಲ. ಮಾನ್ಯ ಮುಖ್ಯ ಮಂತ್ರಿ ವೀರೇಂದ್ರಪಾಟೀಲರ ಆಡಳಿತದಲ್ಲಿ ಇಷ್ಟೊಂದು ಅನ್ಯಾಯ ನಡೆಯುತ್ತಿದೆ. ಇದರ ಬಗ್ಗೆ ಗಮನ ಹರಿಸಿ ನೋಡಲಿಲ್ಲವೆಂದರೆ ಹೇಗೆ? ಆದ್ದರಿಂದ ಕೂಡಲೇ ಈ ಪ್ರಕರಣ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡದಿದ್ದರೆ ನಿಜವಾಗಿ ಲೋಪ ಮಾಡಿದ ಹಾಗೆ ಆಗುತ್ತದೆ.

ಶ್ರೀ ಹೆಚ್. ವಿಶ್ವನಾಥ್.—ಮಾನ್ಯ ಅಧ್ಯಕ್ಷರೇ ಮೈಸೂರಿನಲ್ಲಿ ನಡೆದ ಘಟನೆಗೆ ಯಾವುದೇ ಕಾರಣ ಇರಬಹುದು, ಅನೇಕ ಸಂದರ್ಭಗಳಲ್ಲಿ ಇಂಥ ಘಟನೆಗಳು ನಡೆದಿವೆ ಈ ಘಟನೆಯಲ್ಲಿ ಇಸ್ಲಾಮ್ ಪಾಷಾ ಎನ್ನುವ ಯುವಕ ಸತ್ತುಹೋಗಿದ್ದಾನೆ ಇವನ ಸಾವು ಯಾವ ರೀತಿ ಆಯಿತು ಎಂಬುದನ್ನು ಕಂಡು ಹಿಡಿಯುವ ಸಲುವಾಗಿ ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂದು ನಾನು ಪುನಃ ಹೇಳಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವೀರೇಂದ್ರಪಾಟೀಲ್.—ಮಾನ್ಯ ಅಧ್ಯಕ್ಷರೇ ಸರ್ಕಾರ ಬಹಳಷ್ಟು ಪ್ರಯತ್ನ ಮಾಡಿದರೂ ಈ ತರಹದ ಘಟನೆಗಳು ಅಲ್ಲಲ್ಲಿ, ಅಲ್ಲಲ್ಲಿ ಆವಾಗ ಆವಾಗ ಆಗುವುದು ಸ್ವಾಭಾವಿಕ, ಪೂರ್ತಿಯಾಗಿ ಯಾರ ಕಾಲಕ್ಕೂ ಇದನ್ನು ತಪ್ಪಿಸಂವುದಕ್ಕಾಗಲಿಲ್ಲ. ಹಿಂದೆ ನೀವು ಅಧಿಕಾರದಲ್ಲಿ ಇದ್ದ ಕಾಲದಲ್ಲೂ ಇಂಥ ಘಟನೆಗಳು ಆಗಿವೆ. ನಮ್ಮ ಕಾಲದಲ್ಲೂ ಆಗಿವೆ. ಈ ತರಹದ ಘಟನೆಗಳು ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಇವುಗಳು ವಲ್ನರಬಲ್ ಪ್ರದೇಶಗಳಲ್ಲಿ ಬರುತ್ತವೆ. ಅಲ್ಲಿ ಮೇಲಿಂದ ಮೇಲೆ ಆಗುತ್ತವೆ. ಯಾವಯಾವುದೋ ಕುಂಟು ನೆಪದಲ್ಲಿ ಒಮ್ಮಿಂದೊಮ್ಮೆಗೆ ಎದ್ದು ಬಿಡುತ್ತವೆ. ಈ ತರಹದ ದುರ್ಘಟನೆ ಮೈಸೂರಿನಲ್ಲಿಯೂ ಆಯಿತು. ಪ್ರಶ್ನೆ ಏನೆಂದರೆ, ದುರ್ಘಟನೆ ಆದಾಗ, ಗಲಭೆ ಆದಾಗ, ಕೋಮು ಗಲಭೆ ಆದಾಗ ಸರ್ಕಾರ ಅದರ ಬಗ್ಗೆ ಆಸಕ್ತಿ ತೆಗೆದುಕೊಂಡಿದೆಯೋ ಅಥವಾ ನಿರಾಸಕ್ತಿಯಿಂದ ಇದೆಯೋ ಎಂದು ಇದು ಸರ್ಕಾರದ ಮೇಲೆ ಆರೋಪ ಮಾಡುವುದಕ್ಕೆ ಅಳತೆಗೋಲು ಇರಬಹುದು. ಈ ದುರ್ಘಟನೆ ಆದ ಮೇಲೆ, ಕೋಮು ಗಲಭೆ ಆದಮೇಲೆ ಅವತ್ತಿನ ದಿವಸ ನನ್ನ ಸಹೋದ್ಯೋಗಿ ಗಳಾದ ಶ್ರೀಮಾನ್ ನರಸಿಂಹಮೂರ್ತಿಯವರಿಗೆ ಟೆಲಿಫೋನ್ ಮಾಡಿ ಅಂದೇ ಅವರನ್ನು ಕಳುಹಿಸಿಕೊಟ್ಟೆ.

೧೧–೧೫ ಎ.ಎಂ.

ಸದನ ನಡೆಯುತ್ತಾ ಇರುವಾಗಲೇ ಅಲ್ಲಿಗೆ ಧಾವಿಸಿ ಎಂದು ಹೇಳಿದ್ದೇನೆ. ಅವರು ಅಲ್ಲಿಗೆ ಹೋದರು ಸಂಬಂಧಪಟ್ಟವರನ್ನು ಭೇಟಿ ಮಾಡಿದರು, ಒಂದು ಶಾಂತಿ ಸಮಿತಿಯನ್ನು ಮಾಡಿದರು ಇನ್ನೂ ಏನೇನು ಪ್ರಯತ್ನಗಳನ್ನು ಆ ಕುರಿತು ಮಾಡಬೇಕೋ ಅವುಗಳೆಲ್ಲವನ್ನೂ ಮಾಡಿದ್ದಾರೆ. ಗಲಭೆ ಆದಾಗ ಸ್ವಾಭಾವಿಕವಾಗಿ ಪೋಲೀಸರು ಸ್ಥಾನಿಕವಾಗಿ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಸಕ್ತ ಕಾಲದಲ್ಲಿ ತೆಗೆದುಕೊಳ್ಳುತ್ತಾರೆ ಅದನ್ನು ಹೊರತಾಗಿ ಲಾ ಆಂಡ್ ಆರ್ಡರ್‌ನಲ್ಲಿ ಪ್ರತಿಯೊಂದಕ್ಕೂ ಆದೇಶ ಕೊಡುವುದಕ್ಕೆ ಸರ್ಕಾರ ಹೋಗುವುದಿಲ್ಲ ಮತ್ತು ಅದು ಸಾಧ್ಯವೂ ಇಲ್ಲ. Law and order is the primary responisbility of police ಆ ಲೆಕ್ಕದಲ್ಲಿ ಆ ಕಡೆಯ ಮತ್ತು ಈ ಕಡೆಯ ಮತ್ತು ಕೆಲವರನ್ನು ಅಂದರೆ ಗುಂಪು ಗಲಭೆಯಲ್ಲಿ ಯಾರು ಶಾಮೀಲಾಗಿದ್ದಾರೆ ಅಂಥವರನ್ನು ನೋಡಿ ಅರೆಸ್ಟ್ ಮಾಡಿದ್ದಾರೆ. ಅದರಲ್ಲಿ ಕೆಲವು ಜನರನ್ನು ಬಳ್ಳಾರಿ ಜೈಲಿಗೆ ಕಳುಹಿಸಿದರು ಇವನೊಬ್ಬನೇ ಹೋಗಿಲ್ಲ ದುರ್ದೈವ ಎಂದು ನೀಳಬೇಕು. ಈ ಹುಡುಗನ ಆರೋಗ್ಯ ಸರಿಯಾಗಿಲ್ಲ ಎಂದು ಅಧಿಕಾರಿಗಳಿಗೆ ಸಂಶಯ ಬಂತು. ಆಸ್ಪತ್ರೆಗೆ ಚಿಕಿತ್ಸೆಗೆ ಒಳಪಡಿಸಿದರು. ಚಿಕಿತ್ಸೆ ನಡೆಯುವಾಗಲೇ ಅವನು ತೀರಿಕೊಂಡ.

ಆ ಹುಡುಗನ ಹೆಸರಿನಲ್ಲಿ ಸಹಕಾರಿ ಸಹಕಾರಿ ಸಂಘಕ್ಕೆ ಸೊತ್ತಿಲ್ಲ. ಅಲ್ಲಿ ಇನ್‌ಕ್ವೆಸ್ಟ್ ಆಗಿದೆ. ಪೋಸ್ಟ್ ಮಾರ್ಟಮ್ ಆಗಿದೆ. ಇವುಗಳ ರಿಪೋರ್ಟ್‌ಗಳಿಂದ ನಮಗೆ ಬರಬೇಕಾಗಿದೆ ಅವನ್ನು ಅಧ್ಯಯನ ಮಾಡುತ್ತೇನೆ. ಬಂದಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನೋಡುತ್ತೇವೆ. ಆದಾವ ಮೇಲೆ ವಿಷಯಕ್ಕೆ ಬರುವುದಾದರೆ ಇನ್ನೂ ಡೆಡ್‌ಬಾಡಿ ಮೈಸೂರನ್ನು ಮುಟ್ಟಲಿಲ್ಲ, ಈ ಕ್ಷೇತ್ರ ನಮ್ಮ ಸಹೋದ್ಯೋಗಿ ಅಜೀಜ್‌ಸೇಠ್‌ರವರ ಕ್ಷೇತ್ರಕ್ಕೆ ಬರುತ್ತದೆ ಆದರೆ ಅವರಿಗೆ ಆಲ್ಲಿಗೆ ಹೋಗಲಿಕ್ಕೆ ಆಗಲಿಲ್ಲ. ಅವರ ಬದಲಾಗಿ ಮಾನ್ಯ ಮಹಾಸ್ಯಾರವರಿಗೆ ಆಲ್ಲಿಗೆ ಹೋಗಿ ಬರುವಂತೆ ಹೇಳಿದ್ದೇನೆ. ಅವರು ಆಲ್ಲಿಗೆ ಹೋಗಿ ಮೃತರ ಮನೆಗೂ ಕೂಡ ಹೋಗಿ ಅವರಿಗೆ ಸಮಾಧಾನ ಮಾಡಿದ್ದಾರೆ. ಮತ್ತು ಆ ಮೊಹಲ್ಲಾದಲ್ಲಿರತಕ್ಕಂಥ ಎಲ್ಲಾ ಜನರನ್ನು ಕೂಡ ಭೇಟಿಯಾದರು ಆಲ್ಲಿರುವಂಥ ಕಾರ್ಪೋರೇಟರ್‌ನ್ನು ಕೂಡ ಭೇಟಿಯಾದರು ಅವರು ಜನತಾ ದಳಕ್ಕೆ ಸೇರಿದವರು. ಅವರೆಲ್ಲರೂ ಕೂಡ ಸಚಿವ ಮಹಾಶ್ಯರವರ ಜೊತೆಯಲ್ಲಿ ಇದ್ದರು. ಅವರೆಲ್ಲರೂ ಇದು ನ್ಯಾಚುರಲ್ ಡೆತ್ ಇದಕ್ಕೆ ಯಾವುದೇ ಬೇರೆ ಕಾರಣ ಇಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಇವೊತ್ತು ಆಲ್ಲಿಯ ಮೊಹಲ್ಲಾದ ಜನರು ಸಮಾಧಾನವಾಗಿದ್ದಾರೆ ಆಲ್ಲಿಯ ಜನರ ಪ್ರತಿನಿಧಿಗಳಂ ಸಮಾಧಾನವಾಗಿದ್ದಾರೆ. ನಮ್ಮ ಪಂಕ್ತಿಗಳು ಮೃತರ ಮನೆಯವರಿಗೆ ಹೋಗಿ ಸಮಾಧಾನಮಾಡಿದ್ದಾರೆ. ಇವೊತ್ತು ಆಲ್ಲಿ ಪರಿಸ್ಥಿತಿಯು ಶಾಂತವಾಗಿದೆ ಅಂಥ ಒಂದು ವಾತಾವರಣ ಇರುವಾಗ ಮತ್ತೆ ಇದನ್ನು ನಾವು ವಿಧಾನ ಸಭೆಯಲ್ಲಿ ಕೆದರಿ ವಾತಾವರಣವನ್ನು ಕಲುಷಿತ ಮಾಡುವುದರಲ್ಲಿ ಏನೂ ಅರ್ಥವಿಲ್ಲ ಒಂದು ವೇಳೆ ಅವರ ಬಗ್ಗೆ ನಮಗೆ ಏನು ಅನುಕಂಪ ಇದೆ ಅದನ್ನು ನಾವು ಯಾರಿಂದಲೂ ಕಲಿತುಕೊಳ್ಳಬೇಕಾಗಿಲ್ಲ ಒಂದು ವೇಳೆ ಅವನು ಜೈಲಿನಲ್ಲಿದ್ದಾಗ ಅತ್ಯಾಚಾರಕ್ಕೆ ಒಳಪಟ್ಟಿರಬಹುದಾಗಿದೆ ಎನ್ನುವುದು ಸರಕಾರಕ್ಕೆ ಮನದಟ್ಟಾದರೆ ಆ ಬಗ್ಗೆ ನ್ಯಾಯಾಂಗ ತನಿಖೆ ಮಾಡುವುದಕ್ಕೆ ಸರಕಾರವು ಹಿಂದು ಮುಂದು ನೋಡುವುದಿಲ್ಲ. ಆದರೆ ಆ ಬಗ್ಗೆ ಆಲ್ಲಿನ ರಿಪೋರ್ಟ್‌ಗಳು ಬರಬೇಕು ಅಂತೆಯೇ ನಾವು ಪ್ರಕಿಯೊಂದಕ್ಕೂ ಜ್ಯುಡಿಶಿಯಲ್ ಎನ್‌ಕ್ವೆಯರಿ ಆಗಬೇಕೆಂದರೆ ಹೇಗೆ ? ನಿಮ್ಮ ಕಾಲದಲ್ಲಿಯೂ ಆಗಿರತಕ್ಕಂಥ ನ್ಯಾಯಾಂಗ ವಿಚಾರಣೆಗಳ ಬಗ್ಗೆ ನೋಡಿದ್ದೇವೆ. ಅವುಗಳೆಲ್ಲವೂ ಪೇಪರ್‌ನಲ್ಲಿ ಉಳಿದುಕೊಂಡಿವೆ. ಬೇಕಾದರೆ ಆ ಮೇಲೆ ವಿವರ ಕೊಡುತ್ತೇನೆ ಒಮ್ಮೆ ನ್ಯಾಯಾಂಗ ವಿಚಾರಣೆಗಾಗಿ ಆದೇಶ ಕೊಡುವುದು ಆ ಮೇಲೆ ಅದನ್ನು ಹಾಗೆಯೇ ಉಳಿಸಿಬಿಡುವುದು ಸರಿಯಲ್ಲ. ಈ ರೀತಿಯಲ್ಲಿ ಕೋರ್ಟ್ ಸ್ಟೋರೇಜ್‌ನಲ್ಲಿ ಹಾಕಂಥ ನ್ಯಾಯಾಂಗ ವಿಚಾರಣೆಗಳನ್ನು ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ಆದುದರಿಂದ ಇವೊತ್ತು ಈ ಘಟನೆಯ ಬಗ್ಗೆ ಅವಶ್ಯ ಕಂಡು ಬಂದರೆ ನ್ಯಾಯಾಂಗ ತನಿಖೆಗೆ ಆದೇಶ ಮಾಡುವುದಕ್ಕೆ ಸರಕಾರ ಹಿಂದು ಮುಂದು ನೋಡುವುದಿಲ್ಲ. ಇವೊತ್ತು ಆಲ್ಲಿಯ ಪರಿಸ್ಥಿತಿಯು ಶಾಂತವಾಗಿದೆ. ಆದಕ್ಕಾಗಿ ನಾವೆಲ್ಲರೂ ಕೋಮು ಗಲಭೆಗೆ ಇನ್ನು ಅವಕಾಶ ಕೊಡಲಾಗದಂಥ ಶಾಂತವಾತಾವರಣವನ್ನು ಬೆಳೆಸಿಕೊಂಡು ಉಳಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಇಂಥ ಪರಿಸ್ಥಿತಿ ಇರುವುದರಿಂದ ಇವೊತ್ತು ಇಷ್ಟಕ್ಕೆ ಚರ್ಚೆ ಮುಗಿಸಿ, ಉಳಿದ ವಿಚಾರಗಳನ್ನು ಸರ್ಕಾರಕ್ಕೆ ಬಿಡಬೇಕೆಂದು ಎಲ್ಲರಲ್ಲಿಯೂ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಜಿ. ಆರ್. ಸಿಂಧ್ಯ.—ಮಾನ್ಯ ಮುಖ್ಯಮಂತ್ರಿಯವರು ನಮ್ಮಲ್ಲಿ ಕೇಳಿಕೊಂಡಿದ್ದಾರೆ. ಪರಿಸ್ಥಿತಿಯು ಬಹಳ ಶಾಂತವಾಗಿದೆ ನೀವೆಲ್ಲರೂ ಸಹಕಾರ ಕೊಡಬೇಕೆಂದು ನಮ್ಮ ಸಹಕಾರದ ಬಗ್ಗೆ ತಾವುಗಳು ಯೋಚನೆ ಮಾಡಬೇಕಾಗಿಲ್ಲ. ನಾವು ಖಂಡಿತಾ ಸಹಕಾರ ಕೊಡುತ್ತೇವೆ. ಪರಿಸ್ಥಿತಿಯು ಶಾಂತವಾಗಿರಬೇಕೆಂಬುದು ನಮ್ಮ ಉದ್ದೇಶ, ನಮ್ಮ ಮುಂದಿರತಕ್ಕಂಥ ಪ್ರಶ್ನೆ ಅಂದರೆ ನಮ್ಮ ಕಾಲದಲ್ಲಿ ಆದಂಥ ನ್ಯಾಯಾಂಗ ತನಿಖೆ ಆದೇಶಗಳು ಪೇಪರ್‌ನಲ್ಲಿ ಇವೆ ಎಂದು ಹೇಳಿದ್ದೀರಿ ಇದನ್ನು ಕೇಳಿ ಕೊಂಡು ನಾವು ಸುಮ್ಮನೇ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೆ?

ಅಧ್ಯಕ್ಷರು.—ನೀವು ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳಿದ್ದೀರಿ, ಅದಕ್ಕೆ ಅವರು ರೆಸ್ಪಾನ್ಸ್ ಈ ರೀತಿಯಲ್ಲಿ ಕೊಟ್ಟರು...

ಶ್ರೀ ವೀರೇಂದ್ರಪಾಟೀಲ್.—ಹೀಗೆ ಅನೇಕ ದೃಷ್ಟಿಯಿಂದ ಏನಾದರೂ ಘಟನೆಗಳು ಆದಕೂಡಲೆ ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳಿದರೆ ಅದಕ್ಕೆ ಆದೇಶ ಕೊಡೋಣ ಎಂದು ಹೇಳುತ್ತಾ ಬಂದರೆ ಹೇಗೆ ಎಂಬುದನ್ನು ತಾವು ವಿಚಾರ ಮಾಡಬೇಕಂ.

ಅನೇಕ ಸಲ ಜುಡಿಶಿಯಲ್ ಎನ್‌ಕ್ವೆಯರಿಗೆ ನೀವು ಪ್ರಕಟಣೆ ಮಾಡಿದ್ದಿರಿ, ಆದರೆ ಮುಂದೆ ಏನೂ ಆಗಲಿಲ್ಲ. ಆ ಆರ್ಡರ್‌ಗಳೆಲ್ಲ ಹಾಗೇ ಕುಳಿತುಬಿಟ್ಟವು. ಆದ್ದರಿಂದ ಯಾರನ್ನೋ ಸಮಾಧಾನ ಮಾಡುವುದಕ್ಕಾಗಿ ನ್ಯಾಯಾಂಗ ತನಿಖೆ ಮಾಡುವುದು ಬೇಡ, ದುರ್ಘಟನೆ ನಡೆದು ಇದರಲ್ಲಿ ಏನೋ ನಡೆದಿದೆ ಎಂದು ಸಂಶಯ ಬಂದಾಗ ನಾವೇ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿಸುತ್ತೇವೆ ಎಂದು ನಾನು ಹೇಳಿದ್ದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಿಮಗೆ ಸಿಕ್ಕಿದಂತೆ ಮಾಹಿತಿ ನಮಗೂ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಸಭಾನಾಯಕರು ಬಂದಿದ್ದಾರೆ. ತಾವು ತಪ್ಪು ಚೇಂಬರ್‌ಗೆ ಎಲ್ಲರನ್ನೂ ಕರೆಯಿಸಿ ಮಾತನಾಡಿ. ಬಿ.ಜೆ.ಪಿ. ಯವರು ಹೀಗೆ ಧರಣಿ ಕುಳಿತಿರುವುದೆ ಸಾವ್ಕ ಸಭೆ ನಡೆಸುವುದು ಸರಿಯಲ್ಲ.

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆಗಳು.

ಗಮನ ಸೆಳೆಯುವ ಸೂಚನೆಗಳು.

ಶರಾವತಿ ಜಲವಿದ್ಯುತ್‌ಗಾರದಲ್ಲಿ ಜನರೇಟರ್‌ಗಳು ರಿಪೇರಿಗೊಳಪಟ್ಟಿರುವುದರಿಂದ ರೈತರಿಗಾಗಿರುವ ತೊಂದರೆ.

ಶ್ರೀ ಕೆ. ಲಕ್ಕಪ್ಪ.—ಅಧ್ಯಕ್ಷರೇ ಕೆ.ಇ.ಬಿ:ಯ ಅದಕ್ಷತೆಯ ಕಾರಣದಿಂದ ರೈತರಿಗೆ ವಿದ್ಯುತ್ ಪೂರೈಕೆಯಲ್ಲಿ ಉಂಟಾಗಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವುಯಸಂತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಅಧ್ಯಕ್ಷರೇ, ಶರಾವತಿಯಲ್ಲಿ ಐದಾರು ಜನರೇಟರ್ ರಿಪೇರಿಗೊಳ ಪಟ್ಟಿರುವುದರಿಂದ ವಿದ್ಯುತ್ ಕಡಿತವಾಗಬಹುದೆಂದು ಸಚಿವರು ಕೆಲವು ದಿನಗಳ ಹಿಂದೆ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಆದ್ದರಿಂದ ರೈತರಿಗಾಗುವ ತೊಂದರೆಗಳ ಬಗ್ಗೆ ಸಚಿವರು ಲಕ್ಕಪ್ಪನವರ ಉತ್ತರದ ಜೊತೆಯಲ್ಲೇ ದಯಮಾಡಿ ಹೇಳಬೇಕು.

ಶ್ರೀ ಎಸ್. ಎಂ. ಯಾಹ್ಯಾ(ವಿದ್ಯುತ್ ಸಚಿವರು).—ಎರಡಕ್ಕೂ ಒಂದೇ ಪರಿಹಾರ ಬೇಕಾಗುತ್ತದೆ. ಈಗ ಸ್ಟೇಟ್‌ಮೆಂಟ್ ಓದುತ್ತೇನೆ.

During the year 1989–90 the un-restricted energy requirement was about 18900 MUs as against availablity of about 14350 MUs from all sources, leaving a deficit of 4550 MUs. This deficit has continued. In order to meet this shortage, power cut has been imposed on certain categories of both low tension and high tension consumers. Further the Board is constrained to resort to both scheduled and un-scheduled load-sheading to avoid total collapse of power system.

2. During the year 1989–90, Board has energised 41,247 I. P sets exceeding the targed and has also electrifled 384 hamlets, 992 Harijan Basthies.

3. 20,454 connections (one bulb) were given under the Bhagya Jyothi Scheme to benefit the weaker section and the poorest of the poor in the rural areas.

4. The Board has also constructed new high voltage transmission lines to an extent of 438 circuit Kms and commissioned 14 new sub-stations and about 10000 Kms of distribution lines. 4,500 new distribution transformers were added to the system to reduce system losses. As a result there is improvement in voltage and system reliability. This has also helped supply of power to new consumers. Besides, as per the directions of the Government, priority is being given for electrification of villages/hamlets. Even though the generations is limited, requirements of IP sets, small and big industries are being met.

5. Every year Karnataka Electricity Board is servicing abo 3 lakhs new installations. On an average, every year 13,000 ne